# ನಿಮ್ಮ ಹಿತ್ತಲಿನ ಜೀವ ಜಗತ್ತು

ಚಟುವಟಿಕೆ ಪುಟ 1: ಲಂಟಾನಾದಲ್ಲಿ ಬಣ್ಣ ಬದಲಾವಣೆ

ಗುರಿ:
ಲಂಟಾನಾ ಕಾಮರಾ ಹೂಗುಚ್ಛದಲ್ಲಿ ಬಣ್ಣ ಬದಲಾವಣೆ ಕುರಿತಾದ ಅಧ್ಯಯನ

ಅಗತ್ಯ ಸಾಮಗ್ರಿಗಳು:
ಸೊಳ್ಳೆ ಪರದೆ/ಮಸ್ಲಿನ್ ಬಟ್ಟೆ
ನೋಟ್‌ಪುಸ್ತಕ
ಪೆನ್ಸಿಲ್

ವಿಧಾನ:

- ಸೊಳ್ಳೆ ಪರದೆಯಿಂದ ಸಣ್ಣ ಸಣ್ಣ ಚೀಲಗಳನ್ನು ಮಾಡಿಕೊಳ್ಳಿ. ಟ್ರೇಸಿಂಗ್ ಪೇಪರಿನಿಂದಲೂ ಚೀಲಗಳನ್ನು ಮಾಡಬಹುದು.
- ಇನ್ನೂ ಅರಳದ, ಮೊಗ್ಗಾಗಿರುವ ಲಂಟಾನಾ ಹೂಗುಚ್ಛವನ್ನು ಗುರುತಿಸಿ ಚೀಲದಿಂದ ಕಟ್ಟಿ.
- ಮಾರನೆಯ ದಿನ ಚೀಲವನ್ನು ತೆರೆದು ನಾಲ್ಕು ಹೂವುಗಳನ್ನು ಆರಿಸಿಕೊಳ್ಳಿ. ಅದರ ಬಣ್ಣವನ್ನು ಗುರುತಿಸಿಕೊಳ್ಳಿ (ಸಾಧಾರಣವಾಗಿ ಹಳದಿ ಬಣ್ಣ).
- ಮತ್ತೆ ಚೀಲದಿಂದ ಕಟ್ಟಿ.
- ಒಂದು ವಾರದ ತನಕ ಪ್ರತಿ ಹಗಲು, ಮಧ್ಯಾಹ್ನ, ಸಂಜೆ ಹೂಗುಚ್ಛಕ್ಕೆ ಭೇಟಿಕೊಡಿ ಮತ್ತು ನೀವು ಆರಿಸಿಕೊಂಡ ಹೂವಿನ ಬಣ್ಣವನ್ನು ಗುರುತಿಸಿಕೊಳ್ಳುತ್ತಿರಿ.

ಚರ್ಚಿಸಬೇಕಾದ ವಿಚಾರ:

- ಒಂದೇ ಹೂವಿನ ಬಣ್ಣ ಪದೇ ಪದೇ ಬದಲಾಗುತ್ತದೆಯೇ?
- ದಿನದ ನಿರ್ದಿಷ್ಟ ಸಮಯದಲ್ಲಿ ಹೂವುಗಳು ತಮ್ಮ ಬಣ್ಣವನ್ನು ಬದಲಾಯಿಸುತ್ತವೆಯೇ?
- ಹೂಗುಚ್ಛವನ್ನು ಚೀಲದಿಂದ ಯಾಕೆ ಕಟ್ಟಬೇಕು?

ನಿಮ್ಮ ಹಿತ್ತಲಿನ ಜೀವ ಜಗತ್ತು
ಚಟುವಟಿಕೆ ಪುಟ 2: ಲಂಟಾನಾದ ಮಕರಂದ

ಗುರಿ: ಮಕರಂದದ ಸಾಪೇಕ್ಷ ಪ್ರಮಾಣಗಳನ್ನು ಹೂವಿನ ಬಣ್ಣ ಸೂಚಿಸುತ್ತದೆಯೇ ಎನ್ನುವುದನ್ನು ಗಮನಿಸುವುದು

ಅಗತ್ಯ ಸಾಮಗ್ರಿಗಳು:
ಫಿಲ್ಟರ್ ಹಾಳೆ
ಸ್ಕೇಲ್
ಪೆನ್ಸಿಲ್
ನೋಟ್ ಪುಸ್ತಕ

ವಿಧಾನ:

- ಸಂಪೂರ್ಣವಾಗಿ ಅರಳಿದ ಲಂಟಾಲಾ ಹೂಗುಚ್ಛದಿಂದ ಕೆಲವು ಹಳದಿ ಮತ್ತು ಗುಲಾಬಿ ಬಣ್ಣದ ಹೂವುಗಳನ್ನು ಆರಿಸಿಕೊಳ್ಳಿ.
- ಹೂವಿನ ತೊಟ್ಟಿನಿಂದ ಮಕರಂದದ ಹನಿಯನ್ನು ಫಿಲ್ಟರ್ ಹಾಳೆಯ ಮೇಲೆ ಹಾಕಿ. ಹನಿಯನ್ನು ಹರಡಿ. ಹೊರಬರುವ ಆ ಅತಿ ಸಣ್ಣ  ಹನಿಯೇ ಮಕರಂದವಾಗಿರುತ್ತದೆ.
- ಹಳದಿ ಮತ್ತು ಗುಲಾಬಿ ಬಣ್ಣದ ಹೂವುಗಳಿಗೆ ಇದನ್ನು ಪ್ರತ್ಯೇಕವಾಗಿ ಮಾಡಬೇಕು.

(1) ಹಿಂಡಿ

(2) ಹಳದಿ ಮತ್ತು ಗುಲಾಬಿ ಬಣ್ಣದ ಹೂವುಗಳಲ್ಲಿ ಫಿ ಅನ್ನು ಅಳತೆ ಮಾಡಿ

ಗಮನಿಸಬೇಕಾದ ಅಂಶ:
ಮಕರಂದದ ಬಿಂದು ಒಣಗುವ ಮುನ್ನ, ಅದು ಎಷ್ಟು ದೂರ ಹರಡಿದೆ ಎನ್ನುವುದನ್ನು ನೋಡಿ ಮತ್ತು ಸ್ಕೇಲಿನ ಸಹಾಯದಿಂದ ಅದರ ವ್ಯಾಸವನ್ನು ಅಳತೆ ಮಾಡಿ.

ಚರ್ಚಿಸಬೇಕಾದ ವಿಚಾರ:

- ಹಳದಿ ಮತ್ತು ಗುಲಾಬಿ ಬಣ್ಣದ ಹೂವುಗಳಲ್ಲಿ ಮಕರಂದದ ಪ್ರಮಾಣ.
- ಅಕಸ್ಮಾತ್ ನೀವೇನಾದರೂ ಮಕರಂದವನ್ನು ಅರಸುವ ಕೀಟವಾಗಿದ್ದಲ್ಲಿ, ಮಕರಂದದ ವಿಚಾರದಲ್ಲಿ ನಿಮಗೆ ಯಾವ ಹೂವು ಹೆಚ್ಚು ಲಾಭದಾಯಕವಾಗುತ್ತಿತ್ತು?

ನಿಮ್ಮ ಹಿತ್ತಲಿನ ಜೀವ ಜಗತ್ತು

ಚಟುವಟಿಕೆ ಪುಟ 3: ಆಯ್ಕೆ ಪ್ರಧಾನವಾಗಿರುವ ಚಿಟ್ಟೆಗಳು/ ಚೂಸೀ ಚಿಟ್ಟೆಗಳು

ಗುರಿ: ಹೂವಿನ ಬಣ್ಣಕ್ಕೆ ಅನುಗುಣವಾಗಿ ಪರಾಗಸ್ಪರ್ಷಕಗಳ ಸಂದರ್ಶನ ಬದಲಾಗುತ್ತದೆಯೇ ಎನ್ನುವುದನ್ನು ಗಮನಿಸಿ.

ಅಗತ್ಯ ಸಾಮಗ್ರಿಗಳು:
ಪೆನ್ಸಿಲ್
ನೋಟ್‌ಪುಸ್ತಕ

ವಿಧಾನ:

- ಅರಳಿದ ಹೂವುಗಳೇ ಹೆಚ್ಚಾಗಿರುವ ಲಂಟಾನಾದ ಪೊದೆಯನ್ನು ಆಯ್ಕೆ ಮಾಡಿ.
- ಚೆನ್ನಾಗಿ ಬಿಸಿಲಿರುವ ಒಂದು ದಿನ ನೀವು ಚಿಟ್ಟೆಗಳು ಸಂದರ್ಶಿಸುವ ಲಂಟಾನಾ ಹೂಗುಚ್ಛವೊಂದರ ಬಳಿ ಬಿಡಾರ ಹೂಡಿ.
- ಯಾವ ಹೂವಿಗೆ ಚಿಟ್ಟೆಗಳು ಹೆಚ್ಚು ಭೇಟಿ ಕೊಡುತ್ತವೆ ಎನ್ನುವುದನ್ನು ಗಮನಿಸಿ.

ಚರ್ಚಿಸಬೇಕಾದ ವಿಚಾರ:

- ಚಿಟ್ಟೆ ಹಳದಿ ಹೂವಿನ ಮೇಲೆ ಕುಳಿತುಕೊಳ್ಳುವುದೋ ಅಥವ ಗುಲಾಬಿ/ಕೆಂಪು ಬಣ್ಣದ ಹೂವಿನ ಮೇಲೆ ಕುಳಿತುಕೊಳ್ಳುವುದೋ? ಯಾವ ಹೂವನ್ನು ಅದು ಎಷ್ಟು ಬಾರಿ ಸಂದರ್ಶಿಸುತ್ತದೆ?
- ಗುಲಾಬಿ/ ಹಳದಿ ಹೂವುಗಳ ನಡುವೆ ಅದು ಹೆಚ್ಚಾಗಿ ಯಾವ ಹೂವಿನಿಂದ ಆಹಾರ ಪಡೆಯುತ್ತದೆ?
- ಅದೇ ಪ್ರದೇಶದಲ್ಲಿರುವ ಉಳಿದ ಚಿಟ್ಟೆಗಳೊಂದಿಗೆ ಈ ಚಟುವಟಿಕೆಯನ್ನು ಪುನಃ ಮಾಡಿ. ಉಳಿದ ಬಣ್ಣಗಳಿಗಿಂತ ಯಾವುದಾದರೂ ಒಂದೇ ಬಣ್ಣದ ಹೂವನ್ನು ಅವು ಆರಿಸುತ್ತವೆಯೇ? ಹಾಗಿದ್ದಲ್ಲಿ, ಇದಕ್ಕೆ ಕಾರಣವಾದರೂ ಏನು?